ಎಡ್ವರ್ಡ್ ದಂಪತಿಗಳು ವಾಸವಾಗಿದ್ದ ಮನೆಯ ವಠಾರದಲ್ಲಿದ್ದ ಜನರು ತುಂಬ ಅನ್ಯೋನ್ಯತೆಯಿಂದ ಬಾಳುತ್ತಿದ್ದರು. ಈ ಭಾವನಾತ್ಮಕ ಸಂಬಂಧ ಕೆಪಚ್ಚಿಯ ನಡವಳಿಕೆಯಲ್ಲಿ ಹಲವಾರು ಮಾರ್ಪಾಡುಗಳನ್ನು ತಂದಿತು. ಆ ಸಮೂಹದಲ್ಲಿ ಬೆರೆತದ್ದರಿಂದ ಯಾವ ಮನಃಶಾಸ್ತ್ರಜ್ಞನೂ ನೀಡದ ಚಿಕಿತ್ಸೆ ಅವನಿಗೆ ಅಲ್ಲಿ ದೊರಕಿತು. ಅಲ್ಲದೆ ಕೆಪಚ್ಚಿಯ ಚಿಕ್ಕಪ್ಪ ಹಾಗೂ ಚಿಕ್ಕಮ್ಮ ಆತನನ್ನು ಒಬ್ಬ ಸತ್ಪ್ರಜೆಯನ್ನಾಗಿ ಮಾಡುವುದಕ್ಕೆ ಪಣತೊಟ್ಟಿದ್ದರು.

ಅವರ ಮೊದಲ ಸಮಸ್ಯೆ ಇದ್ದದ್ದು ಕೆಪಚ್ಚಿಯ ಶಿಕ್ಷಣದ ಬಗೆಗೆ. ಏಕೆಂದರೆ ಅವನಿಗೆ ಸಾಂಪ್ರದಾಯಿಕ ಅಥವಾ ಯಾವುದೇ ಬೇರೆ ರೀತಿಯ ಶಿಕ್ಷಣ ದೊರೆತಿರಲಿಲ್ಲ. ಹೀಗಾಗಿ ಅವನಿಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕುವುದು ಹೇಗೆಂದೇ ಗೊತ್ತಿರಲಿಲ್ಲ. ಆದುದರಿಂದ ಅವರಿಬ್ಬರೂ ಸೇರಿ ಹಂತಹಂತವಾಗಿ ಕೆಪಚ್ಚಿಗೆ ಬೋಧನೆ ಮಾಡಿದರು, ಶಿಕ್ಷಣ ನೀಡಿದರು. ಮೊದಲ ಅಕ್ಷರದಿಂದ ಎಲ್ಲವನ್ನೂ ಕಲಿಸಿಕೊಟ್ಟರು. ಅವರ ಮೊದಲನೆಯ ಕಾರ್ಯ ಕೆಪಚ್ಚಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸುವುದಾಗಿತ್ತು. ಆ ಮೂಲಕ ಒಂದು ಸಾಮಾಜಿಕ ಪರಿಸರದಲ್ಲಿ ಜೀವಿಸುವ ಮನುಷ್ಯನನ್ನಾಗಿ ಕೆಪಚ್ಚಿಯನ್ನು ರೂಪುಗೊಳಿಸಬೇಕಾಗಿತ್ತು. ಇದನ್ನು ಎಂದೂ ಅವರ ಪೋಷಕರು ಒಂದು ಪ್ರತಿಷ್ಠೆಯ ವಿಷಯವಾಗಿ ಮಾಡಿಕೊಳ್ಳಲಿಲ್ಲ. ಮಾನವಕುಲಕ್ಕೆ ಮಾಡುವ ಸೇವೆ ಎಂಬ ಭಾವದಿಂದ ಕೆಪಚ್ಚಿಗೆ ಸಹಾಯ ಮಾಡುತ್ತಿದ್ದರು. ಕೆಪಚ್ಚಿಯನ್ನು ಒಬ್ಬ ಸಮರ್ಥ ವ್ಯಕ್ತಿಯನ್ನಾಗಿಸುವುದೇ ಅವರ ಧ್ಯೇಯವಾಗಿದ್ದಿತು.

ದಕ್ಷಿಣ ಹ್ಯಾಮ್ಟನ್‌ನ ಸಾರ್ವಜನಿಕ ವ್ಯವಸ್ಥೆಯ ಶಾಲೆಯಲ್ಲಿ, ಮೂರನೆಯ ತರಗತಿಯಲ್ಲಿ ಕೆಪಚ್ಚಿಯ ವಿದ್ಯಾಭ್ಯಾಸ ಪ್ರಾರಂಭ ವಾಯಿತು. ಆ ತರಗತಿಯಲ್ಲಿದ್ದ ಒಬ್ಬ ಅತ್ಯುತ್ತಮ ಶಿಕ್ಷಕಿ ಕೆಪಚ್ಚಿಗೆ ಸಾಕಷ್ಟು ಕಲಿಸಿದಳು. ಶಾಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಪ್ರಾರಂಭಿಸಿದ ಕೆಪಚ್ಚಿ ಅದಕ್ಕಾಗಿ ಆಯ್ದುಕೊಂಡದ್ದು, ಕುಂಚವನ್ನು. ಏಕೆಂದರೆ ಇದೊಂದರಲ್ಲಿ ಮಾತ್ರ ಆತ ಮಾತನಾಡುವ ಅಗತ್ಯ ವಿರಲಿಲ್ಲ. ಕೆಪಚ್ಚಿ ಹಲವಾರು ಭಿತ್ತಿಚಿತ್ರಗಳನ್ನು ಕಾಗದದಲ್ಲಿ ಮೂಡಿಸಿ, ಶಾಲಾ ಉತ್ಸವದಲ್ಲಿ ಪಾಲ್ಗೊಂಡನು. ಕೆಪಚ್ಚಿಯವರೇ ಮುಂದೆ ಹೇಳಿಕೊಂಡಂತೆ, ಅವರು ಒಳ್ಳೆಯ ವಿದ್ಯಾರ್ಥಿಯಾಗಿದ್ದರೂ, ವಿದ್ಯಾಭ್ಯಾಸದ ವಿಷಯದಲ್ಲಿ ಅಂಥ ಶ್ರದ್ಧೆ ಏನೂ ಅವರಿಗೆ ಇರಲಿಲ್ಲ. ನಂತರ ಕೆಪಚ್ಚಿ ಫಿಲಡೆಲ್ಫಿಯಾದ ಉತ್ತರದಲ್ಲಿದ್ದ, ಅತ್ಯುತ್ತಮ ಪ್ರೌಢಶಾಲೆಯೆನಿಸಿದ್ದ ಜಾರ್ಜ್ ಶಾಲೆಗೆ ಸೇರಿದನು. ಇಲ್ಲಿನ ಶಿಕ್ಷಕರು ಅತ್ಯುತ್ತಮ ಮಟ್ಟದವರು. ಹೀಗಾಗಿ ಇಲ್ಲಿ ಕೆಪಚ್ಚಿಗೆ ಉತ್ತಮ ಶಿಕ್ಷಣ ದೊರೆಯಿತು.

ಜಾರ್ಜ್ ಶಾಲೆಯನ್ನು ಮುಗಿಸಿದ ಕೆಪಚ್ಚಿ ಆ್ಯಂಟಿಯೋಕ್‌ನ ಕಲಾ ಕಾಲೇಜಿಗೆ ಸೇರಿಕೊಂಡರು. ಆ ಕಾಲೇಜಿನಲ್ಲಿ ಕಲಿಕೆಯಲ್ಲಿ ನಿಷ್ಠೆಯಿಂದ ತಮ್ಮನ್ನು ತೊಡಗಿಸಿಕೊಂಡರು. ಆಟೋಟಗಳಿಗೆ ವಿನಿಯೋಗಿಸುತ್ತಿದ್ದ ಶಕ್ತಿಯೂ ಈಗ ಅಧ್ಯಯನದ ಕಡೆಗೆ ತಿರುಗಿತು. ಅಲ್ಲಿ ಅವರು ರಾಜಕೀಯ ವಿಜ್ಞಾನವನ್ನು ಕಲಿಯಬೇಕಾಗಿತ್ತು. ಆದರೆ ಸ್ವಲ್ಪ ಸಮಯದಲ್ಲಿಯೇ ಈ ವಿಷಯದಲ್ಲಿ ಅವರಿಗೆ ಭ್ರಮನಿರಸನವಾಯಿತು. ರಾಜಕೀಯ ವಿಜ್ಞಾನದಲ್ಲಿ ವಿಜ್ಞಾನದ ಲವಲೇಶವೂ ಇಲ್ಲ ಎಂದು ಅವರಿಗೆ ಅನ್ನಿಸಿತು. ತಕ್ಷಣವೇ ಅವರು ಮಾಡಿದ ಮೊದಲ ಕೆಲಸ, ಭೌತಿಕ ವಿಜ್ಞಾನದ ಪಠ್ಯಕ್ಕೆ ಬದಲಾಯಿಸಿಕೊಂಡದ್ದು. ಅಲ್ಲಿ ಅವರಿಗೆ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳನ್ನು ಕಲಿಯುವ ಅವಕಾಶ ಸಿಕ್ಕಿತು. ಆ ಕಾಲೇಜಿನಲ್ಲಿ ದೊರೆಯುತ್ತಿದ್ದ ಗಣಿತದ ಎಲ್ಲ ಕೋರ್ಸ್‌ಗಳನ್ನೂ ಅವರು ವಿಷಯವಾಗಿ ಆರಿಸಿಕೊಂಡರು. 'ಬೂಲಿಯನ್ ರೇಖಾಗಣಿತ' ವನ್ನು ಕೂಡ ಕಲಿತರು. ಗಣಿತಶಾಸ್ತ್ರ ಹಾಗೂ ಸಾಂಪ್ರದಾಯಿಕ ಭೌತಶಾಸ್ತ್ರ (Classical Physics) ಅವರಿಗೆ ಅತ್ಯಂತ ಸಂತೋಷವನ್ನು ನೀಡಿದವು. ಭೌತ ಮತ್ತು ಗಣಿತ ಶಾಸ್ತ್ರಗಳು ಅವರಿಗೆ ಬೌದ್ಧಿಕವಾಗಿ ಸಮಾಧಾನ ನೀಡಿದವಾದರೂ ಅವೆಲ್ಲವೂ ಹಳೆಯ ಕಾಲದಿಂದ ಬಂದ ವಿಷಯಗಳು ಎಂಬ ಬೇಸರವಿದ್ದಿತು.

ಅಲ್ಲಿ ಹೊಸದು ಎಂದರೆ 'ಕ್ವಾಂಟಮ್ ಮೆಕ್ಯಾನಿಕ್ಸ್'. ಇದು ೧೯೨೦ರ ದಶಕದಲ್ಲಿ ಅನಾವರಣಗೊಂಡ ಮೂಲಭೂತ ಬದಲಾವಣೆಯ ಶಾಸ್ತ್ರ. ಇದು ಹೊಸ ಪಠ್ಯವಾಗಿ ಸೇರ್ಪಡೆ ಯಾಗಿತ್ತು. ಪ್ರಾಯೋಗಿಕ ಭೌತಶಾಸ್ತ್ರ, ಅದರಲ್ಲೂ ವಿಶಿಷ್ಟವಾದ ಪ್ರಾಯೋಗಿಕ ಕಣ ಭೌತಶಾಸ್ತ್ರಕ್ಕೆ (Partical Physics) ಅತ್ಯಧಿಕ ಪ್ರಮಾಣದಲ್ಲಿ ಬೃಹತ್ ವೇಗವರ್ಧಕಗಳು ಬೇಕಾಗಿದ್ದವು. ಈ ದೃಷ್ಟಿಯಿಂದ ವಿಜ್ಞಾನಿಗಳ ದೊಡ್ಡ ತಂಡಗಳು ಹಾಗೂ ಬೆಂಬಲಿಗ ಗುಂಪುಗಳು ಪ್ರಯೋಗಗಳನ್ನು ಕೈಗೊಳ್ಳುವ ಆವಶ್ಯಕತೆ ಇತ್ತು. ಆದರೆ ಕೆಪಚ್ಚಿಯವರು ತಾವೊಬ್ಬರೇ ಏಕಾಂಗಿಯಾಗಿ ಸಂಶೋಧನೆ ಕೈಗೊಳ್ಳಲು ಸಾಧ್ಯವಾಗುವಂಥ ವಿಜ್ಞಾನದ ವಿಭಾಗವೊಂದನ್ನು ಅರಸುತ್ತಿದ್ದರು. ತಾವೇ ಪ್ರಯೋಗಗಳನ್ನು ಮಾಡಿ ಅದರ ಅನುಭವವನ್ನು ಪಡೆಯುವ ಆಸೆ ಅವರಿಗೆ ಇತ್ತು. ಅದೃಷ್ಟವಶಾತ್ ಆ್ಯಂಟಿಯೋಕ್‌ನಲ್ಲಿ 'ಕೆಲಸ–ಅಧ್ಯಯನ' ಎಂಬ ಅತ್ಯುತ್ತಮ ಕಾರ್ಯಕ್ರಮವಿತ್ತು. ಮೂರು ತಿಂಗಳು ಕ್ಯಾಂಪಸ್‌ನಲ್ಲಿ, ಅನಂತರದ ಮೂರು ತಿಂಗಳು ವಿದ್ಯಾರ್ಥಿಗೆ ಆಸಕ್ತಿಯಿರುವ ಸಂಬಂಧಿತ ಕ್ಷೇತ್ರದಲ್ಲಿ ಕೆಲಸಮಾಡುವ ಅಪೂರ್ವ ಅವಕಾಶ ಇದು. ಪ್ರಯೋಗಾಲಯದ ಕೆಲಸಗಳು ರಾಷ್ಟ್ರದೆಲ್ಲೆಡೆ ಇದ್ದು ಪ್ರತಿ ಮೂರು ತಿಂಗಳಿಗೊಮ್ಮೆ ಹೊಸ ಕೆಲಸ, ಹೊಸ ನಗರದೆಡೆಗೆ ಮೂಟೆಕಟ್ಟಿ ಹೊರಡುತ್ತಿದ್ದರು ಕೆಪಚ್ಚಿ. ಹೀಗೆ ಅವರು ಒಮ್ಮೆ ಬಾಸ್ಟನ್ ನಗರಕ್ಕೂ, ಇನ್ನೊಮ್ಮೆ M.I.T ಗೂ ಹೋದರು.

ಅವರ ಈ 'ಕೆಲಸ–ಅಧ್ಯಯನ'ದ ಪ್ರವಾಸ ನಡೆಯುತ್ತಿರುವ ಸಂದರ್ಭದಲ್ಲಿ, ಅಂದರೆ ಸುಮಾರು ೧೯೫೦ ರಲ್ಲಿ, ಅಣುಜೀವಶಾಸ್ತ್ರ ಜನ್ಮ ತಾಳಿತು. ಎಲ್ಲವೂ ಅಲ್ಲಿ ಹೊಸದೇ. ಸಂಶೋಧನೆಗೆ ಅಲ್ಲಿ ಯಾವುದೇ ಇತಿಮಿತಿ ಇರಲಿಲ್ಲ. ಉತ್ಸಾಹದ ಚಿಲುಮೆ ಎಲ್ಲೆಲ್ಲಿಯೂ ಹರಿಯುತ್ತಿತ್ತು. ಭೌತಶಾಸ್ತ್ರ, ರಸಾಯನಶಾಸ್ತ್ರ, ತಳಿವಿಜ್ಞಾನ ಮತ್ತು ಜೀವಶಾಸ್ತ್ರ ವಿಭಾಗಗಳಿಂದ ಈ ಹೊಸ ವಿಜ್ಞಾನ ವಿಭಾಗಕ್ಕೆ ವಿಜ್ಞಾನಿಗಳು ಪ್ರೀತಿಯಿಂದ ವಲಸೆ ಬಂದರು. ಮುಂದೆ ಇದು ಅದ್ಭುತ ಸಂಕೀರ್ಣ ವಿಷಯಗಳನ್ನು ಅರ್ಥೈಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಎಲ್ಲ ಜೀವಧಾತುಗಳೂ ಈ ಪರಿಶೋಧನೆಯ ವ್ಯಾಪ್ತಿಗೆ ಒಳಪಟ್ಟವು.

ಇವೆಲ್ಲವೂ ೧೯೪೦ ರ ಯುದ್ಧದಿಂದಾಗಿ ಬೀದಿ ಅಲೆಯುವ ಗುಂಪಿನಲ್ಲೊಬ್ಬನಾಗಿದ್ದು, ಅತ್ಯಂತ ಕಠಿಣ ರೀತಿಯಲ್ಲಿ ಬದುಕಿ,